

## ಗಗನದಲಿ ಮೋಡಗಳು ಮುಸುಕಿಹವು ನೋಡು

ಗಗನದಲಿ ಮೋಡಗಳು ಮುಸುಕಿಹವು ನೋಡು
ಮಾನಸದಿ ಸುಮನಗಳು ಮುದುಡಿಹವು ನೋಡು
ಜೀವ ನದಿ ಬತ್ತಿಹವು ಕಮನೀಯ ಕನಸು
ಕುಡಿವ ಜಲ ಬಾವಿಗಳು ಕದಡಿಹವು ನೋಡು
ಹೆಜ್ಜೆ ಹೆಜ್ಜೆಗೆ ಹೊಸತು ದಾರಿಗಳು ನೂರು
ತಿಳಿದಿರದ ದಿಕ್ಕು ಗುರಿ ಕಳೆದಿಹವು ನೋಡು
ಕರುಣೆಗಳು ಕಾತರಿಸಿ ಕನಲಿಹವು ಇಂದು
ಅಂಧ ಸಂದೇಹಗಳೆ ಹೊಳೆದಿಹವು ಇಂದು
ಪೂರ್ವ ಪಶ್ಚಿಮ ಮಾತ್ರ ದಿಕ್ಕುಗಳು ಅಲ್ಲ
ದನಿಯಿರದ ಶಬ್ದ ಪದ ಹಾಡಿಹವು ನೋಡು
ಬಿಸಿಲು ಬೆಂಕಿಗೆ ನರಳಿ ಉಸಿರು ಹೊಡಮರಳಿ
ಬಾಳೆ ಬಾಳೆಯ ತಿರುಳು ಬಾಡಿಹವು ನೋಡು
ಕಾವ್ಯದಲಿ ಪದಪುಂಜ ಗಾಯನದಿ ತಾಳ
ಕಾಡಿಹವು ಬಲು ಮಾಟ ಮಾಡಿಹವು ನೋಡು

## ದಾರಿ ತಪ್ಪಿದ್ದೇನೆ ಇದು ಭಯಾನಕ ಕಾಡು

ದಾರಿ ತಪ್ಪಿದ್ದೇನೆ ಇದು ಭಯಾನಕ ಕಾಡು
ಹೇಗೆ ತಿಳಿಸಲಿ ನಿನಗೆ ನನ್ನ ಇಂದಿನ ಪಾಡು
ಚಳಿಗಾಲ ಮಳೆಯಲ್ಲಿ ನದಿ ಹೊಕ್ಕ ನರಿಯಂತೆ
ಗದಗುಟ್ಟಿ ನಡುಗುತಿವೆ ನನ್ನ ಪ್ರೀತಿಯ ಹಾಡು
ನನ್ನ ಮಧು ಏಕಾಂತ ಹೂಪಕಳೆ ಎಲೆಗಳಲಿ
ಮಂಜು ದಳದಳ ಸುರಿದು ನರಳಿ ಬಳಲಿದೆ ನೋಡು
ಅಂದು ಮುತ್ತಿಟ್ಟಿದ್ದ ನೇಸರನ ನಸು ಕಿರಣ
ಈಗ ಚುಚ್ಚಿವೆ ಚೂಪು ಗಾಳಿ ಗೂಳಿಯ ಕೋಡು
ಹಕ್ಕಿಗಳ ಬೆನ್ನೇರಿ ಗಿರಿ ಶಿಖರ ತುದಿಗೇರಿ
ವಿಶ್ವ ಸಂಚರಿಸಿದ್ದಿ ಎಲ್ಲಿ ಕಳೆಯಿತು ಗೂಡು
ಬೇಡ ಸೋಲಿನ ಸೊಲ್ಲು ಧೃತಿಗೆಡದೆ ಮುನ್ನುಗ್ಗು
ಏಕಾಕಿ ನಿಜ, ಭೀತಿ ಬೇಡ, ಯುದ್ಧವ ಹೂಡು

● ಸಿದ್ಧಲಿಂಗ ಪಟ್ಟಣಶೆಟ್ಟಿ